ದೊಡ್ಡಬಳ್ಳಾಪುರ ನಗರ ಸಭೆವತಿಯಿಂದ ಹಂಚಲಾದ ನಿವೇಶನಗಳು

2042 (2481) : ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕಳೆದ 3 ವರ್ಷಗಳಲ್ಲಿ ದೊಡ್ಡಬಳ್ಳಾಪುರ ನಗರಸಭೆ ಮತಿಯಿಂದ ಹಂಚಲಾದ ನಿವೇಶನಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಎಷ್ಟನ್ನು ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದವರಿಗೆ ಹಂಚಲಾಗಿದೆ; (ವರ್ಷವಾರು ವಿವರಗಳನ್ನು ನೀಡುವುದು)?

(ಆ) ಹಂಚಲು ಇನ್ನೂ ಎಷ್ಟು ನಿವೇಶನಗಳು ಇರುತ್ತವೆ; ಇವುಗಳನ್ನು ಎಂದು ಹಂಚಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

(ಅ) ದೊಡ್ಡಬಳ್ಳಾಪುರ ನಗರ ವಸತಿ ಸಮಿತಿಯ ಮೂಲಕ ಆಶ್ರಯ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು 200 ನಿವೇಶನಗಳನ್ನು ಹಂಚಲಾಗಿದೆ.

ವರ್ಷ	ಪ.ಜಾ.	ಪ.ಪಂ.	ಇತರೆ	ಒಟ್ಟು
1997-98	31	10	127	168
1998-99	14	05	13	32
1999-2000	-	-	-	-
	45	15	140	200

(ಆ) ವೀರಭದ್ರನಪಾಳ್ಯದ ಸರ್ವೆ ನಂ.25 ರಲ್ಲಿ 3.12 ಎಕರೆ ಜಮೀನನ್ನು ದೊಡ್ಡಬಳ್ಳಾಪುರ ತಹಸೀಲ್ದಾರ್‌ರವರು ನಗರಸಭೆಯ ವಶಕ್ಕೆ ಹಸ್ತಾಂತರಿಸಿದ್ದು, ಹೊಸದಾಗಿ ನಗರ ವಸತಿ ಸಮಿತಿಯು ರಚನೆಯಾದ ನಂತರ ನವೇಶನಗಳನ್ನು ಹಂಚಲು ಕ್ರಮ ವಹಿಸಲಾಗುವುದು.

ಬಿಸಿಎಂ ಹಾಸ್ಟೆಲ್‌ಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸೌಕರ್ಯ

2043 (2473) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲ್ ಹೂಂಗಲ್) : ಮಾನ್ಯ ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿರುವ ಬಿ.ಸಿ.ಎಂ. ಹಾಸ್ಟೆಲ್‌ಗಳಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)?

(ಆ) ಪ್ರತಿ ವರ್ಷ ಈ ವಿದ್ಯಾರ್ಥಿಗಳಿಗೆ ಸರ್ಕಾರ ಖರ್ಚು ಮಾಡುತ್ತಿರುವ ಹಣ ಎಷ್ಟು?

(ಇ) ಪ್ರತಿಯೊಬ್ಬ ವಿದ್ಯಾರ್ಥಿಗೆ ಖರ್ಚು ಮಾಡಲಾಗುವ ಹಣ ಎಷ್ಟು? ಮತ್ತು ಬೇರೆ ಯಾವ ಸೌಕರ್ಯ ಒದಗಿಸಲಾಗಿದೆ?